353* (860) ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳದಲ್ಲಿ ಕಡವಿನಕಟ್ಟಾ ಡ್ಯಾಂ ಬಂದಾರದ ನಿರ್ಮಾಣ ಯಾವ ಸಾಲಿನಲ್ಲಿ ಪೂರ್ತಿಗೊಳಿಸಲಾಗಿದೆ;

ಆ) ಇದಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು;

ಇ) ಈಗ ಡ್ಯಾಂನಲ್ಲಿ ನೀರು ಸೋರುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸೋರುವಿಕೆ ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಉ) ಜಡುವಿನಕಟ್ಟ ಡ್ಯಾಂ ನಲ್ಲಿ ಹೂಳು ತುಂಬಿದ್ದು ಸರ್ಕಾರಕ್ಕೆ ಮಾಹಿತಿ ಇದಿಯೇ;

ಊ) ಇದ್ದಲ್ಲಿ, ಇದರ ಹೊಳೆತ್ತಲು ಯಾವ ಯೋಜನೆ ಹಮ್ಮಿಕೊಂಡಿದೆ;

ಋ) ಈ ಡ್ಯಾಂ ನಿರ್ಮಾಣದಲ್ಲಿ ಸರ್ಕಾರದ ಮೂಲ ಉದ್ದೇಶಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) 1965 ರಲ್ಲಿ ಪೂರ್ತಿಗೊಂಡಿದೆ.

ಆ) ರೂ.14.24 ಲಕ್ಷ

ಇ) ಬಂದಿರುತ್ತದೆ.

ಈ) ಈ ಅಣೆಕಟ್ಟೆಯಿಂದ ಭಟ್ಕಳ ನಗರಕ್ಕೆ ಕುಡಿಯುವ ನೀರು ಒದಗಿಸುತ್ತಿರುವುದರಿಂದ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆ ಅಡಿ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ವತಿಯಿಂದ ಈ ಡ್ಯಾಂನ ಸುಧಾರಣೆ ಕೆಲಸ ಕೈಗೊಂಡಿದ್ದು, ಕೆಲಸ ಪ್ರಗತಿಯಲ್ಲಿದೆ.

ಉ) ಬಂದಿರುತ್ತದೆ.

ಊ) ಮೇಲೆ ಪ್ರಶ್ನೆ "ಈ" ಗೆ ನೀಡಿರುವ ಉತ್ತರದಂತೆ ಸುಧಾರಣೆ ಕೆಲಸದಲ್ಲಿ ಹೂಳೆತ್ತುವ ಅಂಶವೂ ಸೇರಿದೆ.

ಋ) ನೀರಾವರಿ ಸೌಲಭ್ಯ ಕಲ್ಪಿಸುವುದು.

354 (943) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳದ ಮಾಜಿ ಶಾಸಕರಾದ ಡಾ: ಯು.ಚಿತ್ತರಂಜನ್ ಇವರ ಹತ್ಯೆಯ ತನಿಖಾ ವರದಿ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಪ್ರಕ್ರಿಯೆ ಈಗ ಯಾವ ಹಂತದಲ್ಲಿದೆ;

ಇ) ತನಿಖಾ ವರದಿಯನ್ನು ಸರ್ಕಾರ ವಿಧಾನ ಮಂಡಲದಲ್ಲಿ ಮಂಡಿಸದಿರಲು ಕಾರಣಗಳೇನು;

ಈ) ಇದೇ ರೀತಿ ಶ್ರೀ ತಿಮ್ಮಪ್ಪನಾಯ್ಕ, ಭಟ್ಕಳ ಇವರ ತನಿಖಾ ಹಂತ ಪ್ರಗತಿಯಲ್ಲಿದೆಯೇ/

ಉ) ಹಂತಕರುಗಳನ್ನು ಇದುವರೆಗೆ ಬಂಧಿಸದಿರಲು ಕಾರಣಗಳೇನು;

ಊ) ಇವರನ್ನು ಯಾವಾಗ ಬಂಧಿಸಲಾಗುತ್ತದೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ಈ ಕೊಲೆ ಪ್ರಕರಣವು ಸಿ.ಬಿ.ಐ ತನಿಖೆಯಲ್ಲಿರುತ್ತದೆ. ಸದರಿ ಪ್ರಕರಣದ ತನಿಖೆಯನ್ನು ಮುಂದುವರೆಸಲು ದಿನಾಂಕ 23–3–2005ರವರೆಗೆ ಮಾನ್ಯ ನ್ಯಾಯಾಲಯದಿಂದ ಅನುಮತಿ ಪಡೆದಿರುತ್ತದೆ. ಆದ್ದರಿಂದ ತನಿಖಾ ವರದಿಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮತ್ತು ಇ) ಈ ಮೇಲೆ ಹೇಳಿರುವ ಕಾರಣದಿಂದ ಸರ್ಕಾರದ ಮಟ್ಟದಲ್ಲಿ ಸದ್ಯಕ್ಕೆ ಕ್ರಮವಿರುವುದಿಲ್ಲ.

ಈ) ಹೌದು.

ಉ) ತನಿಖೆಯು ಪ್ರಗತಿಯಲ್ಲಿದೆ.

ಊ) ಉದ್ಭವಿಸುವುದಿಲ್ಲ.

355 (397) ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕಿನ ವರದಾ ನದಿಗೆ ಹೊಸದಾಗಿ ಬ್ಯಾರೇಜ್ ನಿರ್ಮಾಣಕ್ಕೆ ಸರ್ಕಾರದ ಮುಂದೆ ಯೋಜನೆ ಏನಾದರು ಇದೆಯೇ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಯಾವಾಗ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ):

ಅ) ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

356 (400) ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ): ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಪ್ಪರ್ ತುಂಗಾ ಯೋಜನೆ ಯಾವ ಹಂತದಲ್ಲಿದೆ;

ಆ) ಪೂರ್ಣ ಕಾಮಗಾರಿ ಯಾವ ವರ್ಷ ಮುಕ್ತಾಯವಾಗುವುದು;

ಇ) ಇದರಿಂದ ಹಾವೇರಿ ತಾಲ್ಲೂಕಿನ ಎಷ್ಟು ಎಕರೆ ಪ್ರದೇಶ ನೀರಾವರಿಯಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಸಚಿವರು):

ಅ) ತುಂಗಾ ಮೇಲ್ದಂಡೆ ಯೋಜನೆಯ ಅಣೆಕಟ್ಟು ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಮುಖ್ಯ ನಾಲೆಯ ಉದ್ದ 329.50 ಕಿ.ಮೀ. ಇದ್ದು, ಇದರಲ್ಲಿ ಕಿಮೀ. 174ರ ವರೆಗಿನ (ಕಿ.ಮೀ.111 ರಿಂದ 114 ಹೊರತುಪಡಿಸಿ) ನಾಲಾ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ. ಕಿ.ಮೀ. ನಂ.1 ಮತ್ತು 2ಕ್ಕೆ ಸಂಬಂಧಿಸಿದಂತೆ ಅರಣ್ಯ ಪ್ರದೇಶದ ವರ್ಗಾವಣೆಯು ಅನುಮತಿ ಇತ್ತೀಚೆಗೆ ದೊರೆತಿದ್ದು ಕಾಮಗಾರಿಗಳನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು. ಕಿಮೀ.111 ರಿಂದ 114 ರವರೆಗೆ ಬರುವ ನಾಲಾ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು ಶೀಘ್ರವಾಗಿ ಕೈಗೆತ್ತಿಕೊಳ್ಳಲಾಗುವುದು. ಜೂನ್ 2006 ರಲ್ಲಿ ಕಿಮೀ. 174ರ ವರೆಗೆ ಬರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಿಸಿದ ಅಚ್ಚುಕಟ್ಟಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಉಳಿದಂತೆ ಕಿಮೀ.175ರ ನಂತರದ ನಾಲಾ ಕಾಮಗಾರಿಗಳ ಸರ್ವೆ ಮತ್ತು ಅಂದಾಜುಪಟ್ಟಿಗಳನ್ನು ತಯಾರಿಸುವ ಕಾರ್ಯವು ಪ್ರಗತಿಯಲ್ಲಿದೆ.